**ಕರ್ನಾಟಕ ಸರ್ಕಾರ**

# ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

## 2012-13ನೇ ಸಾಲಿನ ವಾರ್ಷಿಕ ವರದಿ

1885ರಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಅಸ್ತಿತ್ವದಲ್ಲಿತ್ತು. 2004ರಲ್ಲಿ ಹೊಸದಾಗಿ ಆರಂಭಗೊಂಡ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಸರ್ಕಾರಿ ಆದೇಶದ ಸಂಖ್ಯೆ: **ಕಸಂವಾಪ್ರ 10 ಕೆಎಂಯು 2012 ದಿನಾಂಕ 23-2-2012ರ ಮೇರೆಗೆ ಈ ಎರಡೂ ಇಲಾಖೆಗಳನ್ನು ವಿಲೀನಗೊಳಿಸಿ ಪುನರ್ ರಚಿಸಲಾಗಿದೆ. ಆ ನಂತರ** ಇಲಾಖಾ ಮುಖ್ಯಸ್ಥರನ್ನಾಗಿ ಆಯುಕ್ತರನ್ನು ನೇಮಿಸಲಾಗಿದೆ.

ನಿರ್ದೇಶಕರು(ಪ್ರಾಚ್ಯವಸ್ತು), ನಿರ್ದೇಶಕರು(ವಸ್ತುಸಂಗ್ರಹಾಲಯಗಳು), ಉಪ ನಿರ್ದೇಶಕರು, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ನೋಂದಣಾಧಿಕಾರಿ, ಪತ್ರಾಂಕಿತ ಸಹಾಯಕರು, ಸಹಾಯಕ ನಿರ್ದೇಶಕರು, ಪುರಾತತ್ವ ಸಂರಕ್ಷಣಾ ಸಹಾಯಕರು, ಕ್ಯೂರೇಟರ್, ಪುರಾತತ್ವ ಸಹಾಯಕರು, ಸಹಾಯಕ ಕ್ಯೂರೇಟರ್ ಹಾಗೂ ಇತರ ಸಿಬ್ಬಂದಿಗಳ ಸಹಕಾರದೊಂದಿಗೆ ಇಲಾಖೆಯು ಮುನ್ನಡೆಯುತ್ತಲಿದ್ದು ವಿಸ್ತರಣೆಯ ಹಾದಿಯಲ್ಲಿದೆ.

ಪ್ರಸ್ತುತ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು **ಕಲೆ ಮತ್ತು ಸಂಸ್ಕೃತಿಗೆ** ಸಂಬಂಧಿಸಿದ **ಯೋಜನೆ** ಮತ್ತು **ಯೋಜನೇತರ** ಶೀರ್ಷಿಕೆ ಅಡಿಯಲ್ಲಿ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಇಲಾಖೆಯ ಮುಖ್ಯ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಕಲಾಕೃತಿಗಳ ನೋಂದಣಿ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತು ಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು, ವಸ್ತುಪ್ರದರ್ಶನ, ವಿಚಾರ ಸಂಕಿರಣ, ಕಾರ್ಯಾಗಾರ, ಪಾರಂಪರಿಕ ನಡಿಗೆ ಇತ್ಯಾದಿ.,

ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು **ಇಲಾಖೆಯ ವಸ್ತುಸಂಗ್ರಹಾಲಯಗಳಲ್ಲಿ ಪ್ರದರ್ಶಿಸುವ ಮೂಲಕ** ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಜವಾಬ್ದಾರಿಯನ್ನು ಇಲಾಖೆಯು ನಿರ್ವಹಿಸುತ್ತಾ ಬರುತ್ತಿದೆ. ಸಂರಕ್ಷಿತ ಪ್ರಾಚೀನ ಸ್ಮಾರಕಗಳ ಸಂರಕ್ಷಣೆಯನ್ನು ಇಲಾಖೆಯು ಸ್ವತಂತ್ರವಾಗಿಯೂ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ನ ಸಹಯೋಗದೊಡನೆ ಕೈಗೊಳ್ಳುತ್ತಿದೆ. ಕರ್ನಾಟಕ ರಾಜ್ಯದಲ್ಲಿರುವ ರಾಜ್ಯ ಸಂರಕ್ಷಿತ ಸ್ಮಾರಕಗಳ ಸಂಖ್ಯೆ: 765.

ಪಾರಂಪರಿಕ ಪ್ರದೇಶಗಳಾದ **ಮೈಸೂರು, ಶ್ರೀರಂಗಪಟ್ಟಣ, ಬೀದರ್, ಗುಲ್ಬರ್ಗಾ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ** ಒಟ್ಟು ಆರು ಪಾರಂಪರಿಕ ಪ್ರದೇಶಗಳ ಮತ್ತು ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. **ಇದಲ್ಲದೆ 2012-13ನೇ ಸಾಲಿನ ಅಯವ್ಯಯ ಭಾಷಣದಲ್ಲಿ ಸನ್ನತಿ,**

**ನಾಗಾವಿ, ಕುಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮುಲೇಖೇಡು, ಮೇಲುಕೋಟೆ ಈ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ.**

**ಇಲಾಖೆಯ ಮುಖ್ಯಸ್ಥರಾಗಿ ಶ್ರೀ ಪಿ.ಎಸ್. ವಸ್ತ್ರದ್, ಭಾ.ಆ.ಸೇ, ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಇವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.**

ಇಲಾಖೆಯ ಆಡಳಿತದ ವ್ಯಾಪ್ತಿಯಲ್ಲಿ ಮೈಸೂರು, (ಪರಂಪರೆ) ಗುಲ್ಬರ್ಗಾ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಉಪನಿರ್ದೇಶಕರ ಕಛೇರಿಗಳು ಇವೆ ಹಾಗೂ ಸರ್ಕಾರಿ ವಸ್ತುಸಂಗ್ರಹಾಲಯ ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ ಹಾಸನ ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಗುಲ್ಬರ್ಗಾ ರಾಯಚೂರು, ಹೂವಿನ ಹಡಗಲಿ ಸೇರಿದಂತೆ ಒಟ್ಟು ಹದಿಮೂರು ಸಂಗ್ರಹಾಲಯಗಳು ಹಾಗೂ ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಮತ್ತು ಅಥಣಿಯಲ್ಲಿ ಶಿಲ್ಪಗಳ ಗ್ಯಾಲರಿಯು ಒಳಪಟ್ಟಿದೆ.

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಈ ಇಲಾಖೆಯ ಸಿಬ್ಬಂದಿಯ ವಿವರ ಕೆಳಕಂಡಂತಿದೆ.

| ಹುದ್ದೆಗಳ ವರ್ಗ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಖಾಲಿಯಿರುವ ಹುದ್ದೆಗಳು |
|---|---|---|---|---|---|---|---|
| ಎ | 11 | 8 | 8 | – | 5 | – | 3 |
| ಬಿ | 7 | 3 | 2 | 1 | – | – | 4 |
| ಸಿ | 87 | 58 | 39 | 19 | 10 | 9 | 29 |
| ಡಿ | 119 | 76 | 60 | 16 | 26 | 13 | 43 |
| ಒಟ್ಟು | 224 | 145 | 109 | 36 | 43 | 22 | 79 |

## ವೃಂದ ಮತ್ತು ನೇಮಕಾತಿ ನಿಯಮಗಳು

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28–2–1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹಾಗೂ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲು ಸರ್ಕಾರಕ್ಕೆ ಪ್ರಸ್ತಾಪಿಸಲಾಗುತ್ತಿದೆ.

**ನಿವೃತ್ತಿ :**

**2012-13ನೇ ಸಾಲಿನಲ್ಲಿ ಗ್ರೂಪ್ -ಎ 1, ಗ್ರೂಪ್ ಸಿ -3 ಗ್ರೂಪ್ 'ಡಿ' -9 ಜನ ಸೇರಿದಂತೆ ಒಟ್ಟಾರೆ 13ಜನ ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.**

**ಕಾಯ್ದೆ ಮತ್ತು ನಿಯಮಗಳು:-** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ದಿ ಕರ್ನಾಟಕ ಏನ್ಸಿಯೆಂಟ್ ಅಂಡ್ ಹಿಸ್ಟಾರಿಕಲ್ ಮಾನ್ಯುಮೆಂಟ್ಸ್ ಅಂಡ್ ಆರ್ಕಿಯಾಲಾಜಿಕಲ್ ಸೈಟ್ಸ್ ಅಂಡ್ ರಿಮೇನ್ಸ್ ಆಕ್ಟ್, 1961, ಅಂಡ್ ರೂಲ್ಸ್ 1965.

2) ದಿ ಕರ್ನಾಟಕ ಟ್ರೆಜರ್ ಟ್ರೋವ್ ಕಾಯಿದೆ, 1962, ಅಂಡ್ ರೂಲ್ಸ್ 1963.

**ಸಾರ್ವಜನಿಕ ಕುಂದು ಕೊರತೆಗಳು :**

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಪರಿಗಣಿಸಲಾಗುತ್ತಿದೆ.

**2012-13ನೇ ಸಾಲಿನ ಆಯವ್ಯಯದ ವಿವರಗಳು (ರೂ.ಲಕ್ಷಗಳಲ್ಲಿ)**

| ಕ್ರಮ ಸಂಖ್ಯೆ | ಶೀರ್ಷಿಕೆ | ಆಯುವ್ಯಯ ಅಂದಾಜು | ಮಾರ್ಚ್2013ರ ವರೆಗೆ ವೆಚ್ಚ |
|---|---|---|---|
| 1 | ಯೋಜನೆ | 5300.00 | 4655.30 |
| 2 | ಯೋಜನೇತರ | 700.70 | 673.36 |
| | ಒಟ್ಟು | 6000.70 | 5328.66 |

**ಮುಂದುವರೆದ ಯೋಜನಾ ಕಾರ್ಯಕ್ರಮ:-**

ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ಮೊದಲನೆಯ ವಾರ್ಷಿಕ ವರ್ಷದ ಮುಂದುವರೆದ ಯೋಜನೆಯ ಕಾರ್ಯಕ್ರಮಗಳಿಗೆ **ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 81 ಕೆಎಂಯು 2012 ದಿನಾಂಕ 3-5-2012ಲ್ಲಿ** ಅನುಮೋದನೆ ದೊರೆತಿದೆ. ಅದರಂತೆ ಯೋಜನಾ ಬಾಬ್ತಿನಲ್ಲಿ ರೂ. **5300.00 ಲಕ್ಷ** ಮಂಜೂರಾಗಿದ್ದು ಅದರಲ್ಲಿ **ರೂ. 4655.30** ಲಕ್ಷವನ್ನು ವೆಚ್ಚ ಮಾಡಲಾಗಿದೆ. ವಿವರಗಳು ಇಂತಿವೆ.

**ಪ್ರಾಚ್ಯವಸ್ತು , ಸಂಗ್ರಹಾಲಯಗಳ ಕಾರ್ಯಕ್ರಮಗಳು:**

**ವಿಚಾರ ಸಂಕಿರಣಗಳು ಮತ್ತು ಪುರಾತತ್ವ ಛಾಯಾಚಿತ್ರ ವಸ್ತುಪ್ರದರ್ಶನಗಳು ಮತ್ತು ಸಮಾರಂಭಗಳು:**

1. ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು, ಇವರೊಡನೆ ಸಂಯುಕ್ತವಾಗಿ **ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹವನ್ನು ಬೆಂಗಳೂರಿನಲ್ಲಿ 16ನೇ ಆಗಸ್ಟ್ 2012ರಂ**ದು ಆಚರಿಸಲಾಯಿತು.

2. ವಿಜಾಪುರ ಜಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತಂತೆ ದಿನಾಂಕ 27-11-2012 ಮತ್ತು 28-11-2012ರಂದು ಎರಡು ದಿನಗಳ ವಿಚಾರ ಸಂಕಿರಣವನ್ನು ವಿಜಾಪುರದಲ್ಲಿಹಮ್ಮಿಕೊಳ್ಳಲಾಗಿತ್ತು.

3. ಚಾಮರಾಜನಗರ ಜಲ್ಲೆಯ ಇತಿಹಾಸ ಮತ್ತು ಪುರಾತತ್ವ ಕುರಿತಂತೆ ದಿನಾಂಕ 26-2-2013 ಮತ್ತು 27-2-2013ರಂದು ಎರಡು ದಿನಗಳ ವಿಚಾರ ಸಂಕಿರಣವನ್ನು ಚಾಮರಾಜನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು.

4. ಪೀಠಾಧಿಪತಿ, ಶ್ರೀ ಸುದರ್ಶನ ನರಸಿಂಹ ಕ್ಷೇತ್ರ ಮೈಸೂರು, ಇವರ ಸಂಯುಕ್ತ ಆಶ್ರಯದಲ್ಲಿ ಧರ್ಮ, ಸಾಹಿತ್ಯ ಮತ್ತು ಕಲೆಯಲ್ಲಿ ಕುರ್ಮಾವತಾರ ಕುರಿತ ಎರಡು ದಿನಗಳ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ದಿನಾಂಕ 18 ಮತ್ತು 19ನೇ ಮಾರ್ಚ್ 2013ರಂದು ಮೈಸೂರಿನ ಕೇಂದ್ರ ಕಛೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

**ವಸ್ತು ಪ್ರದರ್ಶನಗಳು:-**

2012 ಅಕ್ಟೋಬರ್ ಮಾಹೆಯಲ್ಲಿ ನಡೆದ ವಾರ್ಷಿಕ ದಸರಾ ಉತ್ಸವದ ಸಂದರ್ಭದಲ್ಲಿ ಈ ಇಲಾಖೆಯ ವತಿಯಿಂದ ಮೈಸೂರು ದಸರಾ ಪರಂಪರೆ ವರ್ಣಚಿತ್ರಗಳ ಪ್ರದರ್ಶನವನ್ನು ಮೈಸೂರಿನ ಕೇಂದ್ರ ಕಛೇರಿಯ ಆವರಣದಲ್ಲಿ ಏರ್ಪಡಿಸಲಾಗಿತ್ತು.

**ಸ್ಮಾರಕಗಳ ಸಂರಕ್ಷಣೆ**

ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಯೋಜನೆ ಬಾಬ್ತಿನಲ್ಲಿ 3 ಮುಂದುವರಿದ ಕಾಮಗಾರಿಗಳು ಹಾಗೂ 73 ಹೊಸ ಕಾಮಗಾರಿಗಳ ಸಂರಕ್ಷಣೆಯನ್ನು ಕೈಗೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

13ನೇ ಹಣಕಾಸು ಅಯೋಗದ ಅನುದಾನದ ಅಡಿಯಲ್ಲಿ ಒಟ್ಟು 89 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

**ಸಂಶೋಧನಾ ಪ್ರಕಟಣೆಗಳು:**

ಪ್ರಸಕ್ತ ಸಾಲಿನಲ್ಲಿ ಬೆಂಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಮತ್ತು ವಿಜಯನಗರ ಅಧ್ಯಯನ ಸಂಪುಟ -17 ಎಂಬ 2 ಸಂಶೋಧನಾ ಗ್ರಂಥವನ್ನು ಹೊರತರಲಾಗಿದೆ.

## ಪರಂಪರೆ ಇಲಾಖೆಯ ಕಾರ್ಯ ಚಟುವಟಿಕೆಗಳು

1) ಇಲಾಖೆಯ ವತಿಯಿಂದ ಪದವಿ ಕಾಲೇಜುಗಳ ಮೂಲಕ 112 ಹಾಗೂ ಪದವಿ ಪೂರ್ವ ಕಾಲೇಜುಗಳಿಂದ 23 ಸೇರಿದಂತೆ ಒಟ್ಟು 135 ಪರಂಪರಾ ಕೂಟಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2) 9 ಕಾರ್ಯಾಗಾರಗಳನ್ನು 13 ಕಲಾ ಶಿಬಿರಗಳನ್ನು 5 ವಿಚಾರ ಸಂಕಿರಣಗಳನ್ನು ಹಾಗೂ 3 ಪಾರಂಪರಿಕ ನಡಿಗೆಯನ್ನು 4 ಇತರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

**ವಸ್ತು ಸಂಗ್ರಹಾಲಯಗಳ ಅಭಿವೃದ್ಧಿ:**

ಪ್ರಸಕ್ತ ಸಾಲಿನಲ್ಲಿ 12 ವಸ್ತು ಸಂಗ್ರಹಾಲಯಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಯೋಜನೇತರ ಕಾರ್ಯಕ್ರಮಗಳು**

**ಸ್ಮಾರಕಗಳ ಸಂರಕ್ಷಣೆ** : ಇದರಲ್ಲಿ ಪ್ರಮುಖವಾಗಿ ಇಲಾಖೆಯ ವತಿಯಿಂದ 6 **ಸಂರಕ್ಷಣಾ ಕಾಮಗಾರಿಗಳನ್ನು ಹಾಗೂ 6 ಹೊಸ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.**

**ಖಾಸಗೀ ಸಹಭಾಗಿತ್ವದ ಅಡಿಯಲ್ಲಿ** ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆಗೆ ರೂ. 80.00 ಲಕ್ಷವನ್ನು ಬಿಡುಗಡೆ ಮಾಡಲಾಗಿದೆ.

**ಸಹಾಯಾನುದಾನ:**

2012-13ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ಲೆಕ್ಕ ಶೀರ್ಷಿಕೆ 2205-00-103-0-18 (ಯೋಜನೆ) 101 ಸಹಾಯಾನುದಾನದ ಅಡಿಯಲ್ಲಿ ಯೋಜನೆ ಬಾಬ್ತಿನಲ್ಲಿ ರೂ. 30.00 ಲಕ್ಷವನ್ನು ಯೋಜನೇತರ ಬಾಬ್ತಿನಡಿಯಲ್ಲಿ ರೂ. 31.93 ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಬಿಡುಗಡೆ ಮಾಡಲಾಗಿದೆ.

**ರಾಜಸ್ವ ಸ್ವೀಕೃತಿ :**

2012-13ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಈ ಕೆಳಕಂಡಂತೆ ರಾಜಸ್ವ ಸ್ವೀಕೃತಿಯನ್ನು ಮಾಡಲಾಗಿದೆ.

| **ಕ್ರಮ ಸಂಖ್ಯೆ** | **ವಿವಿಧ ಮೂಲಗಳು ಮತ್ತು ಲೆಕ್ಕ ಶೀರ್ಷಿಕೆ** | **ರಾಜಸ್ವ ಸ್ವೀಕೃತಿ ರೂ. ಲಕ್ಷಗಳಲ್ಲಿ** |
|---|---|---|
| 1) | ವಸ್ತುಸಂಗ್ರಹಾಲಯಗಳ ಪ್ರವೇಶ ದರ ಹಾಗೂ ಇತರ ಬಾಬ್ತಿನಿಂದ ಬಂದ ಮೊಬಲಗು | 6.53 |
| 2) | ಸಂಶೋಧನಾ ಪ್ರಕಟಣೆಗಳ ಮಾರಾಟದಿಂದ ಬಂದ ಮೊಬಲಗು | 5.45 |
| 3) | ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಮೊಬಲಗು | 0.02 |
| | ಒಟ್ಟು ರೂ. | 12.00 |

2012-13ನೇ ಸಾಲಿನಲ್ಲಿ ವಿಧಾನಸಭೆ/ವಿಧಾನ ಪರಿಷತ್/ ಭರವಸೆ/ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:

| ಕ್ರ. ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಲೋಕಸಭಾ ಪ್ರಶ್ನೆ | ಭರವಸೆ |
|---|---|---|---|---|---|
| 1) | ಆಡಳಿತಾತ್ಮಕ ವಿಷಯ | 4 | 3 | - | - |
| 2) | ಸಂರಕ್ಷಣಾ ವಿಭಾಗ | 5 | - | 2 | 15 |
| | ಒಟ್ಟು | 9 | 3 | 3 | 15 |

**<u>ಮಾಹಿತಿ ಹಕ್ಕು ಅಧಿನಿಯಮದಡಿ : ಒಟ್ಟು 50 ಅರ್ಜಿಗಳನ್ನು ಸ್ವೀಕರಿಸಿದ್ದು, ಅದಕ್ಕೆ ಉತ್ತರಿಸಲಾಗಿದೆ.</u>**

ಪ್ರಸ್ತುಕ ಸಾಲಿನಲ್ಲಿ 3 ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸಲಾಗಿದೆ.

**<u>ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು</u>**

1. ಇಲಾಖೆಯ ವತಿಯಿಂದ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಪುರಾತತ್ವ ಅನ್ವೇಷಣೆ ಕುರಿತ 10 ದಿನಗಳ ಕ್ಷೇತ್ರ ತರಬೇತಿಯನ್ನು ಜೂನ್ 2012ರ ಮಾಹೆಯಲ್ಲಿ ಏರ್ಪಡಿಸಲಾಗಿತ್ತು.

2. ಕೆಳದಿ ಹಸ್ತ ಪ್ರತಿ ಸಂರಕ್ಷಣಾ ಕೇಂದ್ರ ಕೆಳದಿ ಇವರ ವತಿಯಿಂದ 2012ರ ನವಂಬರ್ ಮಾಹೆಯಲ್ಲಿ ಏರ್ಪಡಿಸಲಾಗಿದ್ದ 5 ದಿನಗಳ ಹಸ್ತ ಪ್ರತಿ ಸಂರಕ್ಷಣಾ ಕಾರ್ಯಾಗಾರಕ್ಕೆ ಇಲಾಖೆಯ ವತಿಯಿಂದ 4 ಜನ ತಾಂತ್ರಿಕ ಸಿಬ್ಬಂದಿಯವರನ್ನು ನಿಯೋಜಿಸಲಾಗಿತ್ತು.

3. Regional Museum of Natural History, Mysore ಇವರ ವತಿಯಿಂದ ಏರ್ಪಡಿಸಲಾಗಿದ್ದ ಪ್ರಾಣಿ ಸಂಗ್ರಹಾಲಯ ಸಂದರ್ಶಕರು ಕುರಿತ ಕಾರ್ಯಾಗಾರಕ್ಕೆ ಈ ಇಲಾಖೆಯ ವತಿಯಂದ ಮೂವರು ಸಿಬ್ಬಂದಿಗಳನ್ನು ನಿಯೋಜಿಸಲಾಗಿತ್ತು.

**ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ:**

ಈ ಇಲಾಖೆಯಲ್ಲಿ ಪ್ರಸ್ತುತ 12 ಆಡಿಟ್ ಪ್ಯಾರಾಗಳು ಮತ್ತು 3 ಸಿ.ಎ.ಜಿ ವರದಿಗಳು ಬಾಕಿ ಇವೆ. 2011-12ನೇ ಸಾಲಿನ ಆಡಿಟ್ ಆಗಿದ್ದು, 2012-13ನೇ ಆಡಿಟ್ ಆಗಬೇಕಾಗಿದೆ.

**ನ್ಯಾಯಾಲಯದ ಪ್ರಕರಣಗಳ ವಿವರಗಳು:**

| ಕ್ರ ಸಂ | ನ್ಯಾಯಾಲಯ | ಒಟ್ಟು ಪ್ರಕರಣ | ಇತ್ಯರ್ಥ ವಾಗಿರುವ ಪ್ರಕರಣಗಳು | ಇತ್ಯಾರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|
| 1) | ಸರ್ವೋಚ್ಛ ನ್ಯಾಯಾಲಯ (ಸುಪ್ರಿಮ್ ಕೋರ್ಟ್) | 3 | 1 | 2 |
| 2) | ಉಚ್ಚ ನ್ಯಾಯಾಲಯ( ಹೈಕೋರ್ಟ್) | 10 | 6 | 4 |
| 3) | ಕರ್ನಾಟಕ ಆಡಳಿತ ಮಂಡಳಿ ನ್ಯಾಯಾಲಯ (ಕೆ.ಎ.ಟಿ ) | 3 | - | 3 |
| 4) | ಕಾರ್ಮಿಕ ನ್ಯಾಯಾಲಯ | 1 | - | 1 |
| 5 | JMFC ಸ್ಥಳೀಯ ನ್ಯಾಯಾಲಯ ಪ್ರಕರಣಗಳು | 3 | 1 | 2 |
| | ಒಟ್ಟು | 20 | 8 | 12 |

ಈ ರೀತಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯ ಚಟುವಟಿಕೆಗಳು ಮುಂದುವರಿಯುತ್ತಿವೆ.

ಸಹಿ/-

ಆಯುಕ್ತರು,
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು.